SRI S. BHIMANNA KHANDRE.—It is clear that the Government is going against the order of the court. It amounts to contempt of court.....

MR. SPEAKER.—I don't allow further discussion. I call upon Sri Fernandes.....

ಸೂರಜ್ ಡೈಮಂಡ್ ಇಂಡಸ್ಟ್ರೀಸ್ ಬಗ್ಗೆ.

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ಮಾನ್ಯ ಅಧ್ಯಕ್ಷರೇ ಕಳೆದ ಎರಡು ತಿಂಗಳುಗಳ ಹಿಂದೆ ಇಂದಿರಾನಗರದ ಸೂರಜ್ ಡೈಮಂಡ್ ಇಂಡಸ್ಟ್ರೀಸ್ ಬಗ್ಗೆ ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೆವು. ಈ ಬಗ್ಗೆ ಮಾನ್ಯ ಮಂತ್ರಿಗಳ ಗಮನಕ್ಕೂ ಕೂಡ ನಾವು ತಂದಿದ್ದೆವು. ಆದರೆ ಕೆಲವು ದಿವಸಗಳು ಹಿಂದೆ ಪೋಲೀಸ್‌ನವರ ರಕ್ಷಣೆಯನ್ನು ಪಡೆದು ಆ ಕಂಪನಿಯ ಮಾಲೀಕರು ಅಲ್ಲಿರತಕ್ಕಂಥ ಮಿಷನರಿಗಳನ್ನು ಬೇರೆ ಕಡೆ ರಾತ್ರಿ ಎರಡು ಗಂಟೆಯಲ್ಲಿ ಸಾಗಿಸಿದ್ದಾರೆ. ಅಲ್ಲಿರತಕ್ಕಂಥ ಫ್ಯಾಕ್ಟರಿಯ ಯೂನಿಯನ್‌ರವರನ್ನು ಸಹ ಬಂದಿಸಿ ಆ ಕೆಲಸವನ್ನು ಮಾಡಿದ್ದಾರೆ. ಇದರಲ್ಲಿ ಪೋಲೀಸಿನವರು ಮಾಲೀಕರೊಂದಿಗೆ ಶಾಮೀಲಾಗಿ ಈ ಒಂದು ನೀಚ ಕೃತ್ಯವನ್ನು ಮಾಡಿದ್ದಾರೆ. ಇದರಿಂದ ಸಾವಿರಾರು ಜನ ಕಾರ್ಮಿಕರಿಗೆ ತೊಂದರೆಯಾಗಿದೆ. ಪೋಲೀಸಿನವರು ಒಂದು ರೀತಿಯಲ್ಲಿ ಸರ್ಕಾರವನ್ನು ಚೀಟ್ ಮಾಡಿದ್ದಾರೆ. ಆತ ತಮ್ಮ ಕೈಗಾರಿಕೆಯನ್ನು ರಿಜಿಸ್ಟರ್ಡ್ ಮಾಡದೇ ಕೈಗಾರಿಕೆಯನ್ನು ನಡೆಸುತ್ತಿದ್ದ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಸೂಕ್ತ ರೀತಿಯ ಕಾರ್ಯಕ್ರಮವನ್ನು ತೆಗೆದುಕೊಂಡು ಆ ಕೈಗಾರಿಕೆಯ ಮಾಲೀಕರೊಂದಿಗೆ ಶಾಮೀಲಾಗಿರತಕ್ಕಂಥ ಪೋಲೀಸಿನವರ ಮೇಲೆ ಕೂಡ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್(ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು.).—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಹೇಳಿದ ಹಾಗೆ ನನ್ನ ಹತ್ತಿರ ಕೂಡ ಕೆಲವು ಕಾರ್ಮಿಕರು ಬಂದಿದ್ದರು. ಅವರು ನನಗೆ ಕೂಡ ಮನವಿಯನ್ನು ಸಲ್ಲಿಸಿದ್ದಾರೆ. ಏಕೆಂದರೆ ನಾನು ಸಾರ್ವಜನಿಕ ಕುಂದು ಕೊರತೆಗಳ ಖಾತೆಯನ್ನು ಪಹಿಸಿಕೊಂಡಿರುವ ಮಂತ್ರಿಯಾಗಿರುವುದರಿಂದ ರಾತ್ರಿ ವೇಳೆಯಲ್ಲಿ ಮಿಷನರಿಗಳನ್ನು ಬೇರೆ ಕಡೆ ಸಾಗಿಸಿರುವುದರಿಂದ ಮತ್ತು ಇದಕ್ಕೆ ಪೋಲೀಸಿನವರು ಶಾಮೀಲಾಗಿರುವುದರಿಂದ ಅವರ ಮೇಲೆ ಸರ್ಕಾರ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಏಂಡಿತವಾಗಿ ಹಿಂಜರಿಯುವುದಿಲ್ಲ.

ಶ್ರೀ ಮೈಕೇಲ್ ಬಿ ಫರ್ನಾಂಡೀಸ್.—ಸ್ವಾಮಿ ಅದು ರಾತ್ರಿ ಎರಡು ಗಂಟೆಯ ಸಮಯದಲ್ಲಿ ಮಿಷನರಿಯನ್ನು ಸಾಗಿಸುವ ಅವಶ್ಯಕತೆಯಾದರೂ ಏನಿತ್ತು ?

ಅಧ್ಯಕ್ಷರು.—ಮಾನ್ಯ ಚನ್ನಬಸವನಗೌಡರು... ...

VII) ಧಾರವಾಡ ಕೃಷಿ ಕಾಲೇಜಿನ ವಿದ್ಯಾರ್ಥಿಗಳು ತಮ್ಮ ಬೇಡಿಕೆಗಳನ್ನಿಟ್ಟು ಸರದಿ ಸತ್ಯಾಗ್ರಹವನ್ನು ಮಾಡುತ್ತಿರುವ ಬಗ್ಗೆ.

ಶ್ರೀ ಎಸ್. ಚನ್ನಬಸವನ ಗೌಡ.—ಮಾನ್ಯ ಅಧ್ಯಕ್ಷರೇ ಧಾರವಾಡ ಕೃಷಿ ಕಾಲೇಜಿನ ವಿದ್ಯಾರ್ಥಿಗಳು ತಮ್ಮ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟು ದಿನಾಂಕ ೨೬-೩-೮೪ರಿಂದ ಸರದಿ ಉಪವಾಸ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಆದರೆ ಅವರ ಯೋಗ ಕ್ಷೇಮವನ್ನು ವಿಚಾರಣೆ ಮಾಡುವುದಕ್ಕೆ ನಮ್ಮ ಸರ್ಕಾರದಿಂದ ಯಾರೂ ಕೂಡ ಹೋಗಿಲ್ಲವೆಂದು ನನಗೆ ತಿಳಿದು ಬಂತು. ಅಲ್ಲಿರತಕ್ಕಂಥ ಅಧಿಕಾರಿಗಳು ಕೂಡ ಹೋಗಿ ನೋಡಿಲ್ಲ. ಅವರು ತಮ್ಮ ಬೇಡಿಕೆಗಳಲ್ಲಿ ಮೂರು ಬೇಡಿಕೆ ಎಂದರೆ ಧಾರವಾಡದಲ್ಲಿ ಒಂದು ಕೃಷಿ ವಿಶ್ವ ವಿದ್ಯಾನಿಲಯವನ್ನು ಸ್ಥಾಪನೆ ಮಾಡುವ ಬಗ್ಗೆ. ೧೯೭೩ರಲ್ಲಿ ಮಾನ್ಯ ದೇವರಾಜ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಮತ್ತು ಶ್ರೀಮಾನ್ ಕೆ. ಹೆಚ್. ಪಾಟೀಲ್‌ರವರು ಕೃಷಿ ಮಂತ್ರಿಗಳಾಗಿದ್ದಾಗ ಒಂದು ಖಾಸಗೀ ನಿರ್ಣಯವನ್ನು ಮಂಡಿಸಿದ್ದೆ. ಆಗ ನಿರ್ಣಯವನ್ನು ಅವರು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿಕೊಟ್ಟು ಅಲ್ಲಿ ಚರ್ಚೆಯಾಗಿ ಪಾಸು ಆಗಿ ಬಂದಿದೆ. ಅಲ್ಲಿ ಕೃಷಿ ವಿಶ್ವವಿದ್ಯಾನಿಲಯದ ಅವಶ್ಯಕತೆ ಬಹಳ ಇದೆ ಎಂಬುದೂ ಆಗಿನ

ಸರ್ಕಾರಕ್ಕೆ ಕೂಡ ಮನವರಿಕೆಯಾಗಿತ್ತು. ಇವತ್ತು ನಮ್ಮ ಬೆಂಗಳೂರು ನಗರದ ಹೆಬ್ಬಾಳ್‌ನಲ್ಲಿ ಒಂದೇ ಕಡೆ ಕೃಷಿ ವಿಶ್ವವಿದ್ಯಾನಿಲಯವಿದ್ದರೆ ಆಗುವುದಿಲ್ಲ. ಆದ್ದರಿಂದ ತಾವು ಧಾರವಾಡ ನಗರದಲ್ಲಿ ಕೂಡ ಒಂದು ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಿದರೆ ಒಳ್ಳೆಯದು. ಇದರಿಂದ ಆ ಭಾಗದ ರೈತರಿಗೆ ಅನುಕೂಲವಾಗುತ್ತದೆ. ಪಂಜಾಬ್‌ನಲ್ಲಿ ಎರಡು ಮೂರು ವಿಶ್ವವಿದ್ಯಾನಿಲಯಗಳು ಇವೆ ಎಂದು ನಾನು ಕೇಳಿದ್ದೇನೆ. ಪಂಜಾಬಿನಲ್ಲಿ ೨-೩ ಕೃಷಿ ವಿಶ್ವವಿದ್ಯಾನಿಲಯಗಳಿವೆ ಬಾಂಬೆಯಲ್ಲಿ ಎರಡು ಇವೆ. ನಮ್ಮಲ್ಲಿ ಅವಶ್ಯಕವಾಗಿ ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಬೇಕಾಗಿದೆ ಎಂದು ಅವರು ಕೆಲವು ಬೇಡಿಕೆಗಳನ್ನು ಇಟ್ಟಿದ್ದಾರೆ. ಅದೇನೆಂದರೆ, ಕೃಷಿ ಪದವೀಧರರಿಗೆ, ವೈದ್ಯಕೀಯ ಪದವೀಧರರಿಗೆ ಸಿಗುವಷ್ಟು ವೇತನ ದೊರೆಯಬೇಕೆಂದು ಹೇಳುತ್ತೇನೆ. ಕೃಷಿ ವಿಶ್ವವಿದ್ಯಾನಿಲಯದಲ್ಲಿ ರೇಷ್ಮೆಗೆ ಸಂಬಂಧಪಟ್ಟ ವಿಷಯವನ್ನು ಅಧ್ಯಯನ ಮಾಡಲು ವಿಶೇಷ ಅವಕಾಶವನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ ಕರ್ನಾಟಕ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಇವನ್ನು ಐಚ್ಛಿಕ ವಿಷಯಗಳನ್ನಾಗಿ ಸೇರಿಸಬೇಕೆಂದು ಹೇಳುತ್ತೇನೆ. ಇವರ ಸಣ್ಣ ಪುಟ್ಟ ಬೇಡಿಕೆಗಳು ಏನಿವೆ ಅದನ್ನು ಸರ್ಕಾರ ಬೇಗ ಈಡೇರಿಸಬೇಕೆಂದು ಹೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್(ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಸದಸ್ಯರು ವಿದ್ಯಾರ್ಥಿಗಳ ಕೆಲವು ಸಾಮಾನ್ಯ ಬೇಡಿಕೆಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಬೆಂಗಳೂರಿನಲ್ಲಿರತಕ್ಕ ಕೃಷಿ ವಿಜ್ಞಾನ ಕಾಲೇಜಿನ ವಿದ್ಯಾರ್ಥಿಗಳು ಇದೇ ತರಹದ ಕೆಲವು ಬೇಡಿಕೆಗಳನ್ನು ಇಟ್ಟಿದ್ದರು ಅವುಗಳನ್ನೆಲ್ಲ ಪರಿಹಾರ ಮಾಡಿ ಸಮಾಧಾನ ಮಾಡಿ ಅವರು ತಮ್ಮ ಸಂಪನ್ನು ವಾಪಸ್ಸು ತೆಗೆದುಕೊಂಡಿದ್ದಾರೆಂಬ ಮಾತನ್ನು ಅವರು ನೆನಪಿಸಿಕೊಳ್ಳುತ್ತಾರೆಂದು ಹೇಳುತ್ತೇನೆ. ಎರಡನೇ ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವುದು ಒಳ್ಳೆಯದು. ಈಗ ಇರತಕ್ಕ ಒಂದು ವಿಶ್ವವಿದ್ಯಾನಿಲಯ ಸಾಲದು ಎಂದು ಏನು ಅಭಿಪ್ರಾಯ ವ್ಯಕ್ತ ಮಾಡಿದ್ದಾರೆ ಅದರ ಬಗ್ಗೆ ವರದಿ ತರಿಸಬೇಕು ಮತ್ತು ತಜ್ಞರ ಅಭಿಪ್ರಾಯವನ್ನು ಕೇಳಬೇಕು.

ಶ್ರೀ ಎಸ್. ಭೀಮಣ್ಣ ಖಂಡ್ರೆ .—ವರದಿ ಬಂದಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಅದರ ಮೇಲೆ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಸರ್ಕಾರಕ್ಕೆ ಇದರಿಂದ ಹಣ ಖರ್ಚಾಗುವುದರಿಂದ ಅದರ ಪ್ರಯೋಜನ ಏನು ಎಂಬುದನ್ನು ಎಲ್ಲ ದೃಷ್ಟಿಕೋನದಲ್ಲಿ ಪರಿಶೀಲನೆ ಮಾಡಿ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಇದನ್ನು ಪರಿಶೀಲಿಸುತ್ತೇನೆಂದು ಹೇಳುವುದಕ್ಕೆ ಇಷ್ಟವಷ್ಟಿದ್ದೇನೆ.

VIII) ಬಿದರ್ ಹಳ್ಳಿಯ ಬೆಳ್ಳೂರು ಜನತಾ ಕಾಲೋನಿಯಲ್ಲಿ ವಿದ್ಯುತ್ ದೀಪ ಪ್ರಾರಂಭೋತ್ಸವಕ್ಕೆ ಸ್ಥಳೀಯ ಶಾಸಕರನ್ನು ಆಹ್ವಾನಿಸದೇ ಇರುವ ಬಗ್ಗೆ.

ಶ್ರೀ ಎನ್. ಚಿಕ್ಕೇಗೌಡ.—ಈ ಸದನದಲ್ಲಿ ಅನೇಕ ಸಾರಿ, ರಾಮಕೃಷ್ಣ ಹೆಗಡೆಯವರ ಸರ್ಕಾರ ಬಂದನಂತರ ಯಾರೇ ಮಂತ್ರಿಗಳು ಅಧಿಕೃತ ಸಮಾರಂಭಕ್ಕೆ ಹೋಗಲಿ ಅಲ್ಲಿನ ಸ್ಥಳೀಯ ಶಾಸಕರನ್ನು ಪಾಲ್ಗೊಳ್ಳುವಂತೆ ಮಾಡುತ್ತೇವೆಂದು ಹೇಳಿದ್ದಾರೆ. ಈಗ ಮುಖ್ಯ ಮಂತ್ರಿಗಳು ಸದನದಲ್ಲಿ ಇಲ್ಲದೇ ಹೋದರೂ ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕಾಗಿದೆ. ಅದೇನೆಂದರೆ, ೩೦-೩-೨೪ರಲ್ಲಿ ವಿದ್ಯುತ್ ಮತ್ತು ಅಬ್ಕಾರಿ ಮಂತ್ರಿಗಳಾದ ಜೆ ಹೆಚ್. ಪಟೇಲರು ನನ್ನ ಕ್ಷೇತ್ರಕ್ಕೆ ಹೋಗಿ ಬೆಳ್ಳೂರು ಎಂಬ ಗ್ರಾಮದಲ್ಲಿ ಜನತಾ ಕಾಲೋನಿಯಲ್ಲಿ ಬೀದಿ ದೀಪಗಳ ಪ್ರಾರಂಭೋತ್ಸವವನ್ನು ಮಾಡಿದ್ದಾರೆ. ಆ ಸಮಾರಂಭಕ್ಕೆ ಎಲ್ಲರೂ ಜನತಾ ಪಾರ್ಟಿಯವರೇ ಸೇರಿದ್ದಾರೆ. ಅದಕ್ಕೆ ಸಂಬಂಧಪಟ್ಟ ಆಹ್ವಾನ ಪತ್ರಿಕೆನನ್ನ ಹತ್ತಿರ ಇದೆ. ಅವರು ಜನತಾ ಕಾಲೋನಿಯ ಬೀದಿ ದೀಪಗಳ ಉದ್ಘಾಟನೆ ಮಾಡಿಸುವ ಸಂದರ್ಭದಲ್ಲಿ ಜನತಾ ಪಕ್ಷದ ಅಧ್ಯಕ್ಷರು ಅಧ್ಯಕ್ಷತೆ ವಹಿಸಿದ್ದರು, ಜನತಾ ಪಕ್ಷದ ಪ್ರಧಾನ ಕಾರ್ಯದರ್ಶಿ ಜನತಾ ಪಕ್ಷದ ಮಾಜಿ ಶಾಸಕರು ಹೀಗೆ ಎಲ್ಲಾ ಜನತಾ ಪಕ್ಷದವರನ್ನೇ ಕಾರ್ಯಕ್ರಮಕ್ಕೆ ಬರಮಾಡಿಕೊಂಡಿದ್ದರು. ಮಾಡಿಕೊಳ್ಳಲಿ, ಆಭ್ಯಂತರ ಇಲ್ಲ. ಜನತಾ ಪಕ್ಷದವರು ಹೋಗಿ ಜನತಾ ಪಕ್ಷದ ಕಾರ್ಯಕ್ರಮವನ್ನು ನಡೆಸುವುದಕ್ಕೆ ಆಭ್ಯಂತರ ಇಲ್ಲ. ಆದರೆ ವಿದ್ಯುದ್ದೀಪ ಪ್ರಾರಂಭೋತ್ಸವ ಮಾಡಿ ಅಧಿಕಾರಿಗಳನ್ನು ಸೇರಿಸಿಕೊಂಡು ಪಾರ್ಟಿ ಮಾಡುತ್ತಾರೆ ಎಂದು ನನ್ನ ಆಪಾದನೆ.

ಅಧ್ಯಕ್ಷರು.—ಯಾವ ವಿದ್ಯುದ್ದೀಪವನ್ನು ಕೊಟ್ಟಿದ್ದಾರೆ.]